ನಿಂತ ಹಳ್ಳಿಗರೋ! ಒಂದು ಗಳಿಗೆ ಶಾತ್ತನಾರ್‌ಗೆ ಗೊಂದಲವಾಯಿತು. ಬಂದವರೆಲ್ಲರೂ ಶಾತ್ತನಾರ್‌ಗೆ ನಡುಬಾಗಿ ವಂದಿಸಿದರು. ಅವರ ನಡುವೆ ಕೆಲವು ಮಹಿಳೆಯರೂ ಇದ್ದರು. ಕೆಲವು ಕಿರಿಯರು, ನಡುವಯಸ್ಸಿನವರು ಶಾತ್ತನಾರ್ ಅವರ ಪಾದಗಳಿಗೆ ನಮಿಸಿದರು.

ಇದೀಗ ಶಾತ್ತನಾರ್ ಕಣ್ಣುಗಳು ಕತ್ತಲೆಗೆ ಹೊಂದಿಕೊಂಡವು. ನಿಂತವರ ಮುಖಗಳೆಲ್ಲವೂ ಈಗ ನಿಧಾನವಾಗಿ ಆಕಾರ ತಳೆದವು. ಅವರೆಲ್ಲರೂ ಕೈಮುಗಿದೇ ನಿಂತಿದ್ದರು. ಯಾರ ಮುಖದ ಮೇಲೂ ನೆಮ್ಮದಿಯ ಗೆರೆ ಕಾಣಲಿಲ್ಲ. ಏನೋ ಒಂದು ದುಗುಡ, ಆತಂಕ, ಭಯ ಅವರನ್ನು ಆವರಿಸಿತ್ತು. ಅವರು ತೊಟ್ಟಿದ್ದ ಬಟ್ಟೆಗಳನ್ನು ನೋಡಿದಮೇಲೆ ಇವರೆಲ್ಲಾ ಕೃಷಿಕರಂತೆ ತೋರುತ್ತಿದ್ದರು.

ಶಾತ್ತನಾರ್ ಪ್ರತಿಯಾಗಿ ಅವರಿಗೆ ಕೈಮುಗಿದು 'ತಾವು ಯಾರು? ಇಂತಹ ಹೊತ್ತಿನಲ್ಲಿ ಮನೆಗೆ ಬಂದು ನನ್ನನ್ನು ಎಚ್ಚರಿಸಿದಿರಿ! ಒಂದು ವೇಳೆ ನೀವು ಸಂತೆಗೆ ಬಂದ ಅಕ್ಕಪಕ್ಕದ ಹಳ್ಳಿಯವರಾಗಿದ್ದರೆ, ನೀವೆಲ್ಲಾ ಇಲ್ಲೇ ಜಗುಲಿಯ ಮೇಲೆ ನಿರಾತಂಕವಾಗಿ ತಂಗಿ, ಬೆಳಗ್ಗೆ ಹೋಗಬಹುದು. ನನ್ನದೇನೂ ಅಭ್ಯಂತರವಿಲ್ಲ' ಎಂದು ಒಳಗೆ ಹೋಗಿ ತಾಳೆಗರಿಯ ಚಾಪೆಯನ್ನು ತಂದು ಮನೆ ಮುಂದಿನ ವಿಶಾಲವಾದ ಎರಡೂ ಜಗುಲಿಯ ಮೇಲೆ ಹಾಸಿ 'ಬನ್ನಿ ಕುಳಿತುಕೊಳ್ಳಿ' ಎಂದು ಆಹ್ವಾನಿಸಿದರು.

'ನಿಮ್ಮದೆಲ್ಲಾ ಊಟ ಆಗಿಲ್ಲದಿದ್ದರೆ, ನಿಮಗೆ ಈ ರಾತ್ರಿ ಇಲ್ಲಿಯೇ ಅಡುಗೆ ಮಾಡಿಕೊಳ್ಳಲು ಬೇಕಾದ ದಿನಸಿ, ನೀರು-ನಿಡಿ ಮತ್ತು ಅಗತ್ಯವಿರುವಷ್ಟು ಪಾತ್ರೆಗಳ ಏರ್ಪಾಡು ಮಾಡಿಕೊಡುತ್ತೇನೆ. ನೀವೇ ಅಡುಗೆ ಮಾಡಿಕೊಂಡು, ಊಟ ಮಾಡಿ, ಬೆಳಗ್ಗೆ ನಿಮ್ಮ ಊರಿಗೆ ಹೋಗಬಹುದು. ನಮ್ಮ ಮನೆಯವರೆಲ್ಲರೂ ಮಲಗಿದ್ದಾರೆ. ಅವರನ್ನು ಎಚ್ಚರಿಸಲಾಗಲಿಲ್ಲ! ಆದ್ದರಿಂದ ಈ ಮಾತನ್ನು ನಿಮಗೆ ಹೇಳಿದೆ, ಕ್ಷಮಿಸಿ' ಎಂದು ಎಷ್ಟು ವಿನಯವೋ ಅಷ್ಟು ವಿನಯದಿಂದ ಶಾತ್ತನಾರ್ ಹೇಳಿದರು.

ಅವರೊಲ್ಲೊಬ್ಬ ಮುಂದೆ ಬಂದು 'ಅಯ್ಯಾ, ನಾವು ಕುಳಿತುಕೊಳ್ಳಲು ಬಂದವರಲ್ಲ! ನಾವೆಲ್ಲಾ ದೂರದ ಕಾಂಚೀಪುರದಿಂದ ನಿಮ್ಮನ್ನು ಹುಡುಕಿಕೊಂಡು ಬಂದವರು. ಅವರಿವರನ್ನು ಕೇಳಿದ ಮೇಲೆ, ನಿಮ್ಮ ಮನೆ ವರ್ತಕರ ಕೇರಿಯಲ್ಲಿದೆ ಎಂಬುದು ತಿಳಿಯಿತು. ನಮ್ಮ ಬರುವಿನಿಂದ ನಿಮ್ಮ ನಿದ್ದೆಗೆ ಭಂಗ ಬಂದಿದ್ದರೆ ಕ್ಷಮಿಸಿರಿ ಅಯ್ಯಾ. ನಮ್ಮ ನಾಡಿನಲ್ಲಿ ಹೇಳತೀರದ ಬರ ಬಂದಿದೆ. ತಿನ್ನಲು ಅನ್ನವಿಲ್ಲ, ಕುಡಿಯಲು ನೀರಿಲ್ಲ. ಮಕ್ಕಳು, ಹೆಂಗಸರ ಪಾಡಂತೂ ಹೇಳುವಂತಿಲ್ಲ. ಕೆರೆ-ಕಟ್ಟೆಗಳೆಲ್ಲಾ ಬತ್ತಿಹೋಗಿವೆ. ಇನ್ನು ಮೂಕ ಪ್ರಾಣಿಗಳ ಕಷ್ಟವಂತೂ ಹೇಳಲಾಗದು! ಮಳೆಯ ಮೋಡಗಳೆಲ್ಲ ನಮ್ಮ ಕಾಂಚೀಪುರವನ್ನು ಮರೆತಿವೆ. ಅದಕ್ಕಾಗಿ ನಿಮ್ಮ ಬಳಿಗೆ ಬಂದಿದ್ದೇವೆ ಕೃಪೆ ಮಾಡಿ' ಎಂದು ಹೇಳಿದ. ಅವನ ಮಾತುಗಳು ಬರಗಾಲದ ರುಚಿಯನ್ನು ಹೇಳುತ್ತಿದ್ದವು.

ಶಾತ್ತನಾರ್‌ಗೆ ಆಶ್ಚರ್ಯವಾದರೂ ಹಸಿದು ಬಂದವರ ಮುಂದೆ ಅದನ್ನು ತೋರ್ಪಡಿಸಿಕೊಳ್ಳದೆ, 'ಬರಗಾಲದಲ್ಲಿ ನನ್ನನ್ನು ನೋಡಲು ಬಂದಿರಾ! ಹಾಗಾದರೆ ಒಂದು ಗಳಿಗೆ ನಿಂತಿರಿ, ಈಗಲೇ ಬಂದೆ' ಎಂದು ತಮ್ಮ ಕೊಠಡಿಗೆ ಹೋಗಿಬಂದರು. ತಮ್ಮ ಅಂಗಡಿಯ ಬೀಗದೆಸಳನ್ನು ಅವರ ಮುಂದೆ ಚಾಚಿ 'ಹಾಗಾದರೆ ಒಂದು ಕೆಲಸ ಮಾಡಿ, ಈ ಬೀಗದೆಸಳನ್ನು ತಗೆದುಕೊಂಡು ಹೋಗಿ ನನ್ನ ಅಂಗಡಿಯಲ್ಲಿರುವ ಎಲ್ಲ ದವಸ-ಧಾನ್ಯಗಳನ್ನು ಒಂದು ಕಾಳೂ ಬಿಡದಂತೆ ತಗೆದುಕೊಂಡುಹೋಗಿ. ಇದರಿಂದಾದರೂ ನಿಮ್ಮ ಹಸಿವು ಒಂದೆರೆಡು ದಿನದ ಮಟ್ಟಿಗೆ ನೀಗಬಹುದು! ಇದಿಷ್ಟು ಸಹಾಯವನ್ನು ಮಾತ್ರ ನಾನು ಮಾಡಬಲ್ಲೆ' ಎಂದರು.

ಶಾತ್ತನಾರ್ ಕೈಯಲ್ಲಿದ್ದ ಬೀಗದೆಸಳನ್ನು ನೋಡಿ ಅವರು ಹಾವು ಕಂಡಂತೆ ಬೆಚ್ಚಿ ಹಿಂದೆ ಸರಿದರು. 'ಅಯ್ಯಾ, ನಾವು ಬಂದಿರುವುದು ನಿಮ್ಮ ಅಂಗಡಿಯನ್ನು ದೋಚಲು ಅಲ್ಲ. ನಮ್ಮ ಹಸಿವನ್ನು, ಬಡತನವನ್ನು ಒಂದೆರೆಡು ದಿನಗಳಮಟ್ಟಿಗೆ ಹೋಗಲಾಡಿಸಿಕೊಳ್ಳಲೂ ಅಲ್ಲ! ಇದನ್ನೆಲ್ಲಾ ಶಾಶ್ವತವಾಗಿ ಇಲ್ಲವಾಗಿಸುವ ಸಾಮರ್ಥ್ಯ ನಿಮ್ಮಲ್ಲಿದೆ ಎಂದು ತಿಳಿದು ಬಂದಿದ್ದೇವೆ. ಇಲ್ಲ ಎನ್ನಬೇಡಿ. ಮುರುಗನಾಣೆ' ಎಂದು ದೈನ್ಯದಿಂದ ಹೇಳಿದರು.

'ಅಯ್ಯಾ, ಬರಗಾಲದಿಂದಾಗಿ ಎರಡು ವರುಷಗಳಿಂದ ಹೇಗೋ ಕಾಲಹಾಕಿದ್ದೇವೆ. ಇದೀಗ ನಮ್ಮ ಗದ್ದೆಕೋಗು, ಎಲೆತೋಟಗಳು ಒಣಗಿವೆ. ನೀರಿನ ಸೆಲೆಗಳೆಲ್ಲಾ ತಳಕಂಡಿವೆ. ಬೇಲಿಯಲ್ಲೂ ಕೂಡ